**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಉಡುಪಿ ಜಿಲ್ಲೆ , ಉಡುಪಿ.**

**<u>ಸೆಷನ್ಸ್ ಕೇಸ್ ನಂಃ 6/2024</u>** **<u>ಫ್ರಾ.ಸಾ.47</u>**
**<u>ಚಾ.ಸಾ.95</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಪುನೀತ್ ಎಸ್. |
| ತಂದೆಯ ಹೆಸರು | - | ವಿ.ಎಸ್.ಸುಂದರ್ |
| ವಯಸ್ಸು | - | 41 ವರ್ಷ |
| ಉದ್ಯೋಗ | - | ಗ್ರಾಮ ಆಡಳಿತಾಧಿಕಾರಿ, ಉಡುಪಿ |
| ವಿಳಾಸ | - | ಉಡುಪಿ |

ದಿನಾಂಕಃ 09.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ</u>**

ನಾನು 2023 ನೇ ಸಾಲಿನಲ್ಲಿ 76 ಬಡಗಬೆಟ್ಟು ಗ್ರಾಮದ ಗ್ರಾಮ ಆಡಳಿತಾಧಿಕಾರಿ ಆಗಿ ಕೆಲಸ ಮಾಡುತ್ತಿದ್ದೆ. ದಿನಾಂಕ 16.11.2023 ರಂದು ಉಡುಪಿ ತಹಶೀಲ್ದಾರರ ಕಚೇರಿಯಿಂದ ಕರೆ ಮಾಡಿ ನೇಜಾರು ಕೇಸಿಗೆ ಸಂಬಂಧಪಟ್ಟಂತೆ ನನ್ನನ್ನು ಸೆನ್ ಪೋಲಿಸ್ ಠಾಣೆಗೆ ಪಂಚರಾಗಿ ಹೋಗಲು ತಿಳಿಸಿದರು. ತಹಶೀಲ್ದಾರರು ಮಾಡಿದ ಆದೇಶದಂತೆ ನಾನು ಸೆನ್ ಪೋಲಿಸ್ ಠಾಣೆಗೆ ಹೋದೆ. ನನ್ನ ಜೊತೆ ಚಾಸಾ.96 ರವರನ್ನು ಸಹಾ ಪಂಚರಾಗಿ ಹೋಗಲು ಆದೇಶಿಸಿದ್ದಾರೆ. ಆದೇಶದ ಪ್ರತಿಯನ್ನು ನಿಪಿ-253 ಎಂದು ಗುರುತಿಸಲಾಯಿತು. ಅದೇ ದಿನ ಬೆಳಿಗ್ಗೆ 9:45 ಸಮಯದಲ್ಲಿ ನಾನು ಮತ್ತು ಚಾಸಾ.96 ಸೆನ್ ಪೋಲಿಸ್ ಠಾಣೆಗೆ ಹೋದೆವು. ಅಲ್ಲಿ ಪ್ರಕರಣದ ತನಿಖಾಧಿಕಾರಿಯಾದ ಮಂಜುನಾಥರವರು ಇದ್ದರು. ಅವರು ನಮಗೆ ಮೊಬೈಲಿನಲ್ಲಿರುವ ಮಾಹಿತಿಯನ್ನು ರಿಟ್ರೀವ್ ಮಾಡುವುದು ಇದೆ, ಆ ಪಂಚನಾಮೆಗೆ ಪಂಚರಾಗಿ ಸಹಕರಿಸಲು ತಿಳಿಸಿ

ನಮಗೆ ನೋಟೀಸ್ ಕೊಟ್ಟರು. ನೋಟೀಸನ್ನು ನಿಪಿ-254 ಎಂದು, ಸಾಕ್ಷಿಯ ಸಹಿಯನ್ನು ನಿಪಿ-254(ಎ) ಎಂದು ಗುರುತಿಸಲಾಯಿತು.

2. ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಎಸ್.ಎಚ್.ಓ. ಮೊಹರು ಹಾಕಿದ್ದ ವಸ್ತುವನ್ನು ನಮ್ಮ ಸಮಕ್ಷಮ ತೆಗೆದಿದ್ದು, ಅದರಲ್ಲಿ ಆರೋಪಿಗೆ ಸೇರಿದ Redmi ಕಂಪೆನಿಯ ಮೊಬೈಲ್ ಇತ್ತು. ಆ ಸಮಯದಲ್ಲಿ ಮೊಬೈಲಿನಲ್ಲಿದ್ದ ಮಾಹಿತಿಯನ್ನು ರಿಟ್ರಿವ್ ಮಾಡಲು ಸೆನ್ ಅಪರಾಧ ಪೋಲಿಸ್ ಠಾಣೆಯ ತಾಂತ್ರಿಕರು ಇದ್ದರು, ಅವರನ್ನು ತನಿಖಾಧಿಕಾರಿ ನಮಗೆ ಪರಿಚಯ ಮಾಡಿಕೊಟ್ಟರು. ನಂತರ ತನಿಖಾಧಿಕಾರಿ ಸದ್ರಿ ಮೊಬೈಲನ್ನು ಸದ್ರಿ ತಾಂತ್ರಿಕರಿಗೆ ಕೊಟ್ಟರು. ಅವರು ಮೊಬೈಲನ್ನು ಆನ್ ಮಾಡಿ ಅದಕ್ಕೆ ಕೇಬಲ್ ಕನೆಕ್ಷನ್ ಕೊಟ್ಟು ಅದರಲ್ಲಿರುವ ಡಾಟಾಗಳನ್ನು ಎಕ್ಸಟ್ರಾಕ್ಟ್ ಮಾಡಿ ಪಿಡಿಎಫ್ ಗೆ ಕನ್‌ವರ್ಟ್ ಮಾಡಿ ಸಿಡಿಗೆ ಅಳವಡಿಸಿದರು. ಡಾಟಾಗಳ ಸ್ಕ್ರೀನ್ ಶಾಟ್ ತೆಗೆದು ಅದಕ್ಕೆ ಅನೆಕ್ಷರ್-1 ಮತ್ತು ಅನೆಕ್ಷರ್-2 ಎಂದು ಗುರುತು ಕೊಟ್ಟರು. ನಂತರ ಪುನಃ ಮೊಬೈಲನ್ನು ಪ್ಯಾಕ್ ಮಾಡಿ ಸೀಲು ಮಾಡಿ ತನಿಖಾಧಿಕಾರಿ ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ಬೆಳಿಗ್ಗೆ 10:00 ಗಂಟೆಯಿಂದ 11:00 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿ ಗುರುತಿಸಿದ್ದು, ಪಂಚನಾಮೆ ಯನ್ನು ನಿಪಿ-255 ಎಂದು, ಸಾಕ್ಷಿಯ ಸಹಿಯನ್ನು ನಿಪಿ-255(ಎ) ಎಂದು ಗುರುತಿಸಲಾಯಿತು.

3. ಆ ದಿನ ಡಾಟಾ ಪ್ರಿಂಟ್ ತೆಗೆದ ಅನೆಕ್ಷರ್-1 ಮತ್ತು ಅನೆಕ್ಷರ್-2 ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-256 ಮತ್ತು 257 ಎಂದು ಗುರುತಿಸಲಾಯಿತು. ನಿಪಿ-257 ರಲ್ಲಿ ಒಂದು ಭಾವಚಿತ್ರ ಇದೆ. ಮಹಜರು ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ. ಅದರಲ್ಲಿ ನನ್ನ ಮತ್ತು ಸಹ ಪಂಚನ ಇರುವಿಕೆ ಕಂಡುಬರುತ್ತದೆ. ಎರಡು ಫೋಟೋಗಳನ್ನು ನಿಪಿ-258 ಮತ್ತು 259 ಎಂದು ಗುರುತಿಸಲಾಯಿತು.

4. ನಂತರ ವೃತ್ತ ನಿರೀಕ್ಷಕರು ನಮಗೆ ಮಧ್ಯಾಹ್ನ ಊಟ ಮುಗಿಸಿಕೊಂಡು ಮಲ್ಪೆ ವೃತ್ತ ನಿರೀಕ್ಷಕರ ಕಚೇರಿಗೆ ಬರುವಂತೆ ತಿಳಿಸಿದರು. ಮಧ್ಯಾಹ್ನ 2:00 ಗಂಟೆಗೆ ನಾನು ಮತ್ತು ಚಾಸಾ.96 ವೃತ್ತ ನಿರೀಕ್ಷಕರ ಕಚೇರಿಗೆ ಹೋದೆವು. ಅಲ್ಲಿ ತನಿಖಾಧಿಕಾರಿ ಮಂಜುನಾಥ ಇದ್ದರು. ಪ್ರಕರಣದ ಆರೋಪಿ ಪ್ರವೀಣ್ ಚೌಗಲೆ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಇದ್ದ. ತನಿಖಾಧಿಕಾರಿ ನಮಗೆ ಆತನನ್ನು ಪರಿಚಯಿಸಿ ಆತ ಕೊಲೆ ಪ್ರಕರಣದ ಆರೋಪಿ ಇದ್ದಾನೆ ಎಂದು ತಿಳಿಸಿ, ಆತ ಘಟನೆಗೆ ಸಂಬಂಧಪಟ್ಟ ಸ್ಥಳಗಳನ್ನು ತೋರಿಸಿಕೊಡುತ್ತಾನೆ, ಅಲ್ಲಿ ತಯಾರಿಸುವ ಮಹಜರಿಗೆ ಪಂಚರಾಗಿ ಸಹಕರಿಸುವಂತೆ ತಿಳಿಸಿದ್ದು, ನಾವು ಒಪ್ಪಿದ ಕಾರಣ ನಮಗೆ ನೋಟೀಸ್ ಕೊಟ್ಟರು. ನೋಟೀಸನ್ನು ನಿಪಿ-260 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-260(ಎ) ಎಂದು ಗುರುತಿಸಲಾಯಿತು.

5. ನೋಟೀಸ್ ಪಡೆದ ನಂತರ ಆರೋಪಿ ನಮಗೆ ಆತ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯವನು ಎಂದು ಹೇಳಿ, ಘಟನೆಗೆ ಸಂಬಂಧಪಟ್ಟ ಸ್ಥಳಗಳಾದ ಘಟನೆಯ ದಿನ ರಿಕ್ಷಾ ಹತ್ತಿದ ಸ್ಥಳ, ಘಟನಾ ಸ್ಥಳ, ಘಟನಾ ಸ್ಥಳದಿಂದ ವಾಪಸ್ಸು ಹೋಗುವಾಗ ಮೋಟಾರು ಸೈಕಲ್ ಹತ್ತಿದ ಸ್ಥಳ ನಂತರ ಮೋಟಾರು ಸೈಕಲಿನಿಂದ ಇಳಿದು ರಿಕ್ಷಾ ಹತ್ತಿದ ಸ್ಥಳಗಳನ್ನು ತೋರಿಸಿಕೊಡುವುದಾಗಿ ಹೇಳಿದನು. ನಂತರ ಪೋಲಿಸರು ಆತನ ಮುಖಕ್ಕೆ ಮುಸುಕು ಹಾಕಿದರು. ನಾವೆಲ್ಲಾ ಪೋಲಿಸ್ ಟಿಟಿ ವಾಹನದಲ್ಲಿ ಹೊರಟೆವು. ಆರೋಪಿ ದಾರಿಯನ್ನು ತೋರಿಸುತ್ತಾ ನೇರವಾಗಿ ನೇಜಾರಿನ ಘಟನೆ ನಡೆದ ಮನೆಗೆ ಕರೆದುಕೊಂಡು ಹೋದನು. ಆರೋಪಿ ವಾಹನದಿಂದ ಇಳಿದು ಘಟನಾ ಸ್ಥಳವನ್ನು ತೋರಿಸಿರುತ್ತಾನೆ. ಆತ ನಾನು ಆ ದಿನ ಸಣ್ಣ ಗೇಟಿನಿಂದ ಕಂಪೌಂಡ್ ಒಳಗೆ ಹೋದೆ, ಆಗ ಐನಾಜ್‌ಳ ತಮ್ಮ ಅಂಗಳದಲ್ಲಿ ಸೈಕಲ್ ಬಿಡುತ್ತಿದ್ದ ಸ್ಥಳ, ನಂತರ ಮುಖ್ಯ ಬಾಗಿಲಿನಿಂದ ಮನೆಯ ಒಳಗೆ ಹೋದ ಸ್ಥಳ, ನಂತರ ಮನೆಯಲ್ಲಿ ಆತ ಕುಳಿತ ಸ್ಥಳ, ಆನಂತರ ತಕ್ಷೀರು ನಡೆಸಿದ

ಐದು ಸ್ಥಳಗಳನ್ನು ತೋರಿಸಿಕೊಟ್ಟಿರುತ್ತಾನೆ. ಆತ ತೋರಿಸಿದ ತಕ್ಷೀರು ಸ್ಥಳಗಳ ವಿವರಗಳನ್ನು ಪಂಚನಾಮೆಯಲ್ಲಿ ತೋರಿಸಿದ್ದಾರೆ.

6. ನಂತರ ಆತ ಮನೆಯ ಒಳಗಿನಿಂದ ಹೊರಗೆ ಬಂದು ಗೇಟಿನಿಂದ ಆಚೆಗೆ ಬಂದು ನೇಜಾರು-ಸಂತೆಕಟ್ಟೆಯಲ್ಲಿ ಬೈಕ್ ಹತ್ತಿದ ಸ್ಥಳ ತೋರಿಸಿರುತ್ತಾನೆ. ನಂತರ ಆತ ಸಂತಕಟ್ಟೆ-ನೇಜಾರು ಜಂಕ್ಷನ್ ನ ಬಳಿ ಇರುವ ರಿಕ್ಷಾ ನಿಲ್ದಾಣದ ಬಳಿ ಕರೆದುಕೊಂಡು ಬಂದು ಅಲ್ಲಿ ತಾನು ರಿಕ್ಷಾದಲ್ಲಿ ನೇಜಾರಿಗೆ ಹೋಗಿ ವಾಪಸ್ಸು ಬೈಕ್‌ನಲ್ಲಿ ಬಂದು ಅಲ್ಲಿ ಇಳಿದು ಮತ್ತೆ ರಿಕ್ಷಾ ಹತ್ತಿದ ಸ್ಥಳ ಎಂದು ತೋರಿಸಿಕೊಟ್ಟಿರುತ್ತಾನೆ. ಈ ಎಲ್ಲಾ ಸ್ಥಳಗಳ ವಿವರಗಳನ್ನು ನಮೂದು ಮಾಡಿ ಪಂಚನಾಮೆ ಯನ್ನು ಮಧ್ಯಾಹ್ನ 3:00 ಗಂಟೆಯಿಂದ ಸಂಜೆ 5:45 ರವರೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ಎಲ್ಲಾ ಸ್ಥಳಗಳಲ್ಲಿ ಭಾವ ಚಿತ್ರಗಳನ್ನು ತೆಗೆದಿದ್ದಾರೆ. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಈ ಹಂತದಲ್ಲಿ ಆರೋಪಿ ಪರ ವಕೀಲರು ಸದ್ರಿ ಪಂಚನಾಮೆಯಲ್ಲಿ ಆರೋಪಿಯ ತಪ್ಪೊಪ್ಪಿಗೆಯ ಅಂಶಗಳು ಉಲ್ಲೇಖ ಆಗಿರುವ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದು, ಸದ್ರಿ ತಕರಾರಿಗೆ ಒಳಪಟ್ಟು ಪಂಚನಾಮೆಯನ್ನು ನಿಪಿ-261 ಎಂದು, ಸಾಕ್ಷಿಯ ಸಹಿಯನ್ನು ನಿಪಿ-261(ಎ) ಎಂದು ಗುರುತಿಸಲಾಯಿತು.

7. ವೃತ್ತ ನಿರೀಕ್ಷಕರ ಕಚೇರಿಯ ಒಳಗಡೆ ಆರೋಪಿಯ ಜೊತೆ ತೆಗೆದಭಾವಚಿತ್ರ ಮತ್ತು ಕಚೇರಿಯಿಂದ ಹೊರಟಾಗ ತೆಗೆದ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-262 ಮತ್ತು 263 ಎಂದು ಗುರುತಿಸಲಾಯಿತು. ನೇಜಾರಿನ ಘಟನೆ ನಡೆದ ಮನೆಯ ಗೇಟ್ ಬಳಿ ಮತ್ತು ಮನೆಯ ಮಂಭಾಗದ ಸಿಟೌಟ್ ಬಳಿ ತೆಗೆದ ಭಾವಚಿತ್ರಗಳನ್ನು

ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-264 ಮತ್ತು 265 ಎಂದು ಗುರುತಿಸಲಾಯಿತು.

8. ಮನೆಯ ಒಳಗಡೆ, ಮುಖ್ಯ ಹಾಲ್ ನಲ್ಲಿ, ಡೈನಿಂಗ್ ಹಾಲ್ ನಲ್ಲಿ, ಐನಾಜ್ ಬಿದ್ದ ಸ್ಥಳ ಮತ್ತು ಬೆಡ್ ರೂಮಿನಲ್ಲಿ ತೆಗೆದ ಒಟ್ಟು 5 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-266 ಎಂದು ಗುರುತಿಸಲಾಯಿತು. ಘಟನಾ ಸ್ಥಳಕ್ಕೆ ಹೋಗಲು ಮತ್ತು ಘಟನೆ ಬಳಿಕ ವಾಪಸ್ಸು ಬಂದು ಆಟೋ ಹತ್ತಿದ ಸ್ಥಳದ ನಾಲ್ಕು ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-267 ಎಂದು ಗುರುತಿಸಲಾಯಿತು. ಆ ದಿನ ನಮ್ಮನ್ನು ಸ್ಥಳಗಳಿಗೆ ಕರೆದುಕೊಂಡು ಹೋದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈ ದಿನ ವಿ.ಸಿ. ಮೂಲಕ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ರಿಟ್ರೀವ್ ಮಾಡಿದ ಮೊಬೈಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು-34 ಎಂದು ಗುರುತಿಸಲಾಗಿದೆ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ.(LADC) ವಕೀಲರಿಂದ:</u>**

ಆ ಸಮಯದಲ್ಲಿ ನಾನು 76 ಬಡಗಬೆಟ್ಟು ಮತ್ತು ಮೂಡನಿಡಂಬೂರು ಗ್ರಾಮಗಳ ಗ್ರಾಮ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಎರಡೂ ಕಚೇರಿಯ ಕರ್ತವ್ಯ ನಿರ್ವಹಿಸುತ್ತಿದ್ದೆ. ಈ ಕಾರಣಕ್ಕೆ ಹೆಚ್ಚಿನ ಕೆಲಸದ ಒತ್ತಡ ಇರುತ್ತಿತ್ತು. ಕಚೇರಿಯ ಅವಧಿ ಬೆಳಿಗ್ಗೆ 10:00 ರಿಂದ ಸಂಜೆ 5:00 ಗಂಟೆಯವರೆಗೆ ಇರುತ್ತದೆ. ಚಾಸಾ.96 ಸಹಾ ಗ್ರಾಮ ಆಡಳಿತಾಧಿಕಾರಿ ಆಗಿದ್ದರು. ನಮ್ಮ ಕಚೇರಿಯಲ್ಲಿ ಚಲನವಲನ ವಹಿ ಇದೆ, ಹಾಜರಾತಿ ಪುಸ್ತಕ ಇರುವುದಿಲ್ಲ. ಕಾರಣ ನಮ್ಮ ಕೆಲಸ ಫೀಲ್ಡ್ ವರ್ಕ್ ಇರುತ್ತದೆ.

2. ದಿನಾಂಕ 16.11.2023 ರಂದು ನಾನು ಬೆಳಗ್ಗಿನ ಸಮಯದಲ್ಲಿ ತಹಶೀಲ್ದಾರ್ ಕಚೇರಿಯಿಂದ ಕರೆ ಬಂದ ಕಾರಣ ಕಚೇರಿಗೆ ಹೋಗಿಲ್ಲ. ಆ ದಿನದ ಚಲನವಲನ ವಹಿಯಲ್ಲಿ ನಮೂದು ಮಾಡಿಲ್ಲ, ಕಾರಣ ಆ ದಿನ ಕಚೇರಿಗೆ ಹೋಗಿಲ್ಲ. ತಹಶೀಲ್ದಾರ್ ರವರು ಕರೆ ಮಾಡಿದಾಗ ಬೆಳಿಗ್ಗೆ 8:45 ಆಗಿತ್ತು. ತಹಶೀಲ್ದಾರ್ ರವರು ಹೇಳಿದ ಮೇರೆಗೆ ನಾನು ಸೆನ್ ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ನಾನು ಮತ್ತು ಚಾಸಾ.96 ಒಟ್ಟಿಗೆ ಸೆನ್ ಠಾಣೆಗೆ ಹೋಗಿರುತ್ತೇವೆ. ತಹಶೀಲ್ದಾರ್ ರವರು ನನಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಆದೇಶಿಸಿದ್ದಾರೆ. ನಿಪಿ-253 ರಲ್ಲಿ ನನ್ನ ಸಹಿ ಇರುವುದಿಲ್ಲ. ಸದ್ರಿ ಆದೇಶವನ್ನು ನಾನು ಇದೇ ದಿನ ಪ್ರಥಮವಾಗಿ ನೋಡುತ್ತಿದ್ದೇನೆ ಮತ್ತು ತಹಶೀಲ್ದಾರ್ ರವರು ಆ ರೀತಿ ಯಾವುದೇ ಆದೇಶ ಮಾಡಿಲ್ಲ ಎಂದರೆ ಸರಿಯಲ್ಲ.

3. ಸೆನ್ ಠಾಣೆಗೆ ಹೋದಾಗ ಬೆಳಿಗ್ಗೆ 9-30 ರಿಂದ 9-45 ಆಗಿತ್ತು. ಸೆನ್ ಠಾಣೆಯಲ್ಲಿ ತನಿಖಾಧಿಕಾರಿ ಮಂಜುನಾಥರವರು ಮತ್ತು ಸೆನ್ ಠಾಣೆಯ ಸಿಬ್ಬಂದಿಯವರು ಇದ್ದರು. ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲು ಮಾಡಿದ್ದ ವಸ್ತುವಿನಲ್ಲಿ ಮೊಬೈಲ್ ಇತ್ತು. ನಾನು ಮೊದಲು ನೋಡಿದ ಮೊಬೈಲ್ ಸ್ವಿಚ್ ಆಫ್ ಇತ್ತು. ಅದನ್ನು ಮಹಜರಿನಲ್ಲಿ ಬರೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ಮೊಬೈಲನ್ನು ಸೆನ್ ಠಾಣೆಯ ಸಿಬ್ಬಂದಿ ಸ್ವಿಚ್ ಆನ್ ಮಾಡಿರುತ್ತಾರೆ. ಮೊಬೈಲನ್ನು ಸುಮಾರು 10-15 ನಿಮಿಷ ಚಾರ್ಜ್ ಮಾಡಿರುತ್ತಾರೆ. ಈ ವಿಚಾರವನ್ನು ಮಹಜರಿನಲ್ಲಿ ಬರೆದಿದ್ದಾರೋ, ಇಲ್ಲವೋ ಗೊತ್ತಿಲ್ಲ. ಚಾರ್ಜ್ ಮಾಡಲು ಉಪಯೋಗಿಸಿದ ವಯರ್ ಅದೇ ಮೊಬೈಲಿಗೆ ಸಂಬಂಧಪಟ್ಟಿದ್ದೋ, ಇಲ್ಲವೋ ಗೊತ್ತಿಲ್ಲ. ಮೊಬೈಲಿನಲ್ಲಿರುವ ಮಾಹಿತಿಯನ್ನು ರಿಟ್ರೀವ್ ಮಾಡುವಾಗ ಯಾವುದಾದರೂ ಪಾಸ್‌ವರ್ಡ್ ಉಪಯೋಗಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ಮಹಜರಿನಲ್ಲಿ ಪ್ರಸ್ತಾಪಿಸಿದ್ದಾರೋ, ಇಲ್ಲವೊ ಗೊತ್ತಿಲ್ಲ.

4. ನಿಪಿ-256 ಮತ್ತು 257 ನ್ನು ನಮ್ಮ ಸಮಕ್ಷಮ ತೆಗೆದಿದ್ದಾರೆ ಎಂದು ತೋರಿಸಲು ಅದರಲ್ಲಿ ಸಹಿ ಇಲ್ಲ ಎಂದರೆ ಸಾಕ್ಷಿ, ಅದು ನಮ್ಮ ಸಮಕ್ಷಮ ತೆಗೆದಿದ್ದಾರೆ, ಆದರೆ ನನ್ನ ಸಹಿ ಪಡೆದಿಲ್ಲ ಎನ್ನುತ್ತಾರೆ. ನನ್ನ ಸಮಕ್ಷಮದಲ್ಲಿ ಯಾವುದೇ ಮೊಬೈಲ್ ನ ಮಾಹಿತಿಯನ್ನು ರಿಟ್ರೀವ್ ಮಾಡಿಲ್ಲ ಎಂದರೆ ಸರಿಯಲ್ಲ. ರಿಟ್ರೀವ್ ಮಾಡಲು ಯಾವ ಮೆಥೆಡನ್ನು ಉಪಯೋಗಿಸಿದ್ದಾರೆ, ಅದರ ಹೆಸರು ಗೊತ್ತಿತ್ತು, ಆದರೆ ಈಗ ನೆನಪಿಗೆ ಬರುತ್ತಿಲ್ಲ. ಮಹಜರಿನಲ್ಲಿ ಯಾವ ಮೆಥೆಡನ್ನು ಉಪಯೋಗಿಸಿದ್ದಾರೆ ಎಂದು ನಮೂದು ಮಾಡಿದ್ದಾರೆ ಗೊತ್ತಿಲ್ಲ. ರಿಟ್ರೀವ್ ಮಾಡುವ ಸಮಯದಲ್ಲಿ ಏನೆಲ್ಲಾ ಮಾಹಿತಿ ಕಂಡುಬಂದಿದೆ ಎಂದು ಮಹಜರಿನಲ್ಲಿ ನಮೂದು ಮಾಡಿಲ್ಲ. ಆ ರೀತಿ ಯಾವುದೇ ಮಾಹಿತಿಯನ್ನು ಮಹಜರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ರಿಟ್ರೀವ್ ಮಾಡಿದ ಮಾಹಿತಿ ಗೊತ್ತು, ಆದರೆ ಏನೆಲ್ಲಾ ಮಾಹಿತಿ ಇದೆ ಎಂದು ಹೇಳಲು ಆಗುವುದಿಲ್ಲ.

5. ಡಾಟಾವನ್ನು ಸಿಡಿ ಗೆ ಅಳವಡಿಸಿದ ನಂತರದಲ್ಲಿ ಸಿಡಿಯನ್ನು ಪ್ಲೇ ಮಾಡಿ ತೋರಿಸಿಲ್ಲ. ಸಿಡಿಯನ್ನು ಸೀಲು ಮಾಡಿ ವಶಪಡಿಸಿಕೊಂಡಿದ್ದಾರೆ. ಆ ಬಗ್ಗೆ ಮಹಜರಿನಲ್ಲಿ ನಮೂದು ಮಾಡಿದ್ದಾರೆ. ಸಿಡಿಯನ್ನು ಸೀಲು ಮಾಡಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಎಸ್.ಎಚ್.ಓ. ಸೀಲು ಹಾಕಿರುತ್ತಾರೆ. ಸೀಲು ಮಾಡುವಾಗ ಮೊಬೈಲನ್ನು ಯಾವ ಮೋಡ್ ನಲ್ಲಿ ಇಟ್ಟಿದ್ದಾರೆ ಗೊತ್ತಿಲ್ಲ. ನನ್ನ ಸಮಕ್ಷಮ ನಿಪಿ-255 ರಂತೆ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಮೊಬೈಲ್ ಮಾಹಿತಿಯನ್ನು ರಿಟ್ರೀವ್ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ತನಿಖಾಧಿಕಾರಿ ಸೃಷ್ಟಿ ಮಾಡಿದ ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸರಕಾರಿ ನೌಕರನಾದ ಕಾರಣ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನೀಡುವ ಅನಿವಾರ್ಯತೆ ಇದೆ

ಎಂದರೆ ಸರಿಯಲ್ಲ. ಪಂಚನಾಮೆಯ ಸಮಯದಲ್ಲಿ ಯಾವುದೇ ಭಾವ ಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳಿಗೆ ಮತ್ತು ಈ ಪ್ರಕರಣಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೊಬೈಲಿನಲ್ಲಿರುವ ಮಾಹಿತಿಯನ್ನು ರಿಟ್ರಿವ್ ಮಾಡಿದ ಸಿಬ್ಬಂದಿಗೆ ಯಾವುದೇ ತಾಂತ್ರಿಕ ತರಬೇತಿ ಇಲ್ಲ ಎಂದರೆ ಸರಿಯಲ್ಲ.

6. ನಾನು ಹೋದ ಎರಡೂ ವೃತ್ತ ನಿರೀಕ್ಷಕರ ಕಚೇರಿ ಉಡುಪಿ ನಗರದ ಮಧ್ಯ ಭಾಗದಲ್ಲಿ ಇದೆ ಮತ್ತು ಜನ ನಿಬಿಡ ಪ್ರದೇಶದಲ್ಲಿದೆ. ವೃತ್ತ ನಿರೀಕ್ಷಕರ ಕಚೇರಿಯಿಂದ ತಾಲೂಕು ಕಚೇರಿಗೆ ಬಂದು ಊಟ ಮುಗಿಸಿಕೊಂಡು ವಾಪಸ್ಸು ವೃತ್ತ ನಿರೀಕ್ಷಕರ ಕಚೇರಿಗೆ ನಾನು ಮತ್ತು ಚಾಸಾ.96 ಒಟ್ಟಿಗೆ ಬಂದೆವು. ಠಾಣೆಯಲ್ಲಿ ತನಿಖಾಧಿಕಾರಿ, ಪೋಲಿಸ್ ಸಿಬ್ಬಂದಿ ಮತ್ತು ಆರೋಪಿ ಇದ್ದರು. ಆರೋಪಿಯನ್ನು ಕಚೇರಿಯ ಒಳಗೆ ಕುಳ್ಳಿರಿಸಿದ್ದರು. ತನಿಖಾಧಿಕಾರಿ ನಮ್ಮನ್ನು ಯಾವ ಉದ್ದೇಶಕ್ಕೆ ಕರೆಸಿದ್ದರು ಎಂಬ ಮಾಹಿತಿಯನ್ನು ನೀಡಿದ್ದಾರೆ. ನಮ್ಮ ಸಮಕ್ಷಮ ತನಿಖಾಧಿಕಾರಿ ಆರೋಪಿ ಯನ್ನು ವಿಚಾರಿಸಿ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ. ಆರೋಪಿಯನ್ನು ಮೊದಲು ನಾನು ಮಾತನಾಡಿಸಿರುತ್ತೇನೆ, ನನ್ನ ಜೊತೆಯಲ್ಲಿ ಚಾಸಾ.96 ಸಹಾ ಮಾತನಾಡಿಸಿರುತ್ತಾರೆ. ನಾವು ಆರೋಪಿ ಜೊತೆ ಮಾತನಾಡಿದ ಬಗ್ಗೆ ಲಿಖಿತವಾಗಿ ನಾನು ಮತ್ತು ಚಾಸಾ.96 ಬರೆದುಕೊಂಡಿಲ್ಲ.

7. ಈ ಪ್ರಕರಣದ ಪೂರ್ವದಲ್ಲಿ ಬೇರೆ ಪ್ರಕರಣದ ಯಾವುದೇ ಆರೋಪಿಯನ್ನು ವಿಚಾರಿಸಿ ಮಾಹಿತಿ ಪಡೆದಿರುವುದಿಲ್ಲ. ನಾನು ಮತ್ತು ಚಾಸಾ.96 ಆರೋಪಿಯನ್ನು ವಿಚಾರಿಸಿಲ್ಲ ಎಂದರೆ ಸರಿಯಲ್ಲ. ನಾವು ಪೋಲಿಸ್ ಟಿಟಿ ವಾಹನ ಮತ್ತು ಪೋಲಿಸ್ ಜೀಪಿನಲ್ಲಿ ಹೋಗಿರುತ್ತೇವೆ. ತಕ್ಷೀರಿನ ಬಗ್ಗೆ ಮಾಧ್ಯಮಗಳಲ್ಲಿ ವರದಿ ಆಗಿತ್ತು. ನಾವು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಯಾವ ಪ್ರದೇಶದಲ್ಲಿ ಪ್ರಕರಣ ಆಗಿತ್ತು ಎಂದು ಗೊತ್ತಿತ್ತು. ಆದರೆ ನಿಖರವಾಗಿ

ಯಾವ ಸ್ಥಳದಲ್ಲಿ ತಕ್ಷೀರು ನಡೆದಿದೆ ಎಂದು ಗೊತ್ತಿಲ್ಲ. ನಾವು ಹೋಗುವ ಪೂರ್ವದಲ್ಲಿ ತನಿಖಾಧಿಕಾರಿ ಸದ್ರಿ ಸ್ಥಳಗಳಿಗೆ ಹೋಗಿದ್ದಾರೋ, ಇಲ್ಲವೋ ಗೊತ್ತಿಲ್ಲ.

8. ನಾನು ಟಿಟಿ ವಾಹನದಲ್ಲಿ ಕುಳಿತಿದ್ದೆ. ಪೋಲಿಸ್ ಇಲಾಖೆಯ ಜೀಪು ಇತ್ತು. ಅದರೆ ಅದು ಯಾರದ್ದು ಎಂದು ಗೊತ್ತಿಲ್ಲ. ಟಿಟಿ ಯಲ್ಲಿ ತನಿಖಾಧಿಕಾರಿ ಇದ್ದರು, ಜೀಪಿನಲ್ಲಿ ಪೋಲಿಸ್ ಸಿಬ್ಬಂದಿ ಇದ್ದರು, ಆದರೆ ಅವರು ಯಾರೆಲ್ಲಾ ಎಂದು ಗೊತ್ತಿಲ್ಲ. ಠಾಣೆಯಿಂದ ನೇರವಾಗಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಘಟನಾ ಸ್ಥಳಕ್ಕೆ ಹೋಗುವ ದಾರಿಯಲ್ಲಿ ರಿಕ್ಷಾ ಹತ್ತಿದ್ದೇನೆ ಎನ್ನಲಾದ ಸ್ಥಳ ಮತ್ತು ರಿಕ್ಷಾದಿಂದ ಇಳಿದಿದ್ದೇನೆ ಎನ್ನುವ ಸ್ಥಳಗಳು ಸಿಗುತ್ತವೆ. ಹೋಗುವಾಗ ಆ ಸ್ಥಳಗಳಲ್ಲಿ ಪರಿಶೀಲನೆ ಮಾಡಿಲ್ಲ. ಆರೋಪಿ ಸಂತೆಕಟ್ಟೆ ಜಂಕ್ಷನ್ ರಿಕ್ಷಾ ನಿಲ್ದಾಣದ ಬಳಿ ಬಸ್ಸಿನಲ್ಲಿ ಬಂದಿರುತ್ತೇನೆ ಎಂದು ಹೇಳಿರುತ್ತಾನೆ. ಆತ ಮಂಗಳೂರಿಂದ ಉಡುಪಿಗೆ ಬರುವ ಬಸ್ಸಿನಲ್ಲಿ ಬಂದಿರುವುದಾಗಿ ಹೇಳಿರುತ್ತಾನೆ. ಘಟನೆ ದಿವಸ ಆರೋಪಿ ಬಸ್ಸಿನಿಂದ ಇಳಿದ ಸ್ಥಳವನ್ನು ಪರಿಶೀಲನೆ ಮಾಡಿರುತ್ತಾರೆ. ಅದರ ಬಗ್ಗೆ ಮಹಜರಿನಲ್ಲಿ ಬರೆದಿದ್ದಾರೆ. ಆ ರೀತಿ ಯಾವುದೇ ಸ್ಥಳಗಳನ್ನು ಪರಿಶೀಲನೆ ಮಾಡಿಲ್ಲ ಮತ್ತು ಮಹಜರಿನಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ.

9. ಆರೋಪಿ ಸಣ್ಣ ಗೇಟಿನ ಮೂಲಕ ಕಂಪೌಂಡ್ ಒಳಗೆ ಹೋದ ಬಗ್ಗೆ ಮಹಜರಿನಲ್ಲಿ ನಮೂದು ಮಾಡಿದ್ದಾರೆ. ಸಿಟೌಟಿನಲ್ಲಿ ಕುಳಿತುಕೊಳ್ಳಲು ಸೋಪಾ ಇತ್ತು, ಕಾರ್ ಪಾರ್ಕಿಂಗ್ ನಲ್ಲಿ ಜೋಕಾಲಿ ಇತ್ತು. ನೇಜಾರು-ಸಂತೆಕಟ್ಟೆ ಮುಖ್ಯ ರಸ್ತೆಯಿಂದ ಮನೆಯ ಗೇಟಿನವರೆಗೆ ಟಿಟಿ ವಾಹನದಲ್ಲಿ ಹೋಗಿರುತ್ತೇವೆ. ಮುಖ್ಯ ರಸ್ತೆಯಿಂದ ಗೇಟ್ ಸುಮಾರು 40 ರಿಂದ 50 ಮೀ. ದೂರ ಇರಬಹುದು. ನಾವು ಹೋದಾಗ ಮನೆಯ ಬಾಗಿಲು ಮುಚ್ಚಿತ್ತು. ಬಾಗಿಲನ್ನು ಪೋಲಿಸ್ ಸಿಬ್ಬಂದಿಯೇ ತೆಗೆದಿರುತ್ತಾರೆ. ನಾವು ಹೋದ ಸಮಯದಲ್ಲಿ ಪ್ರಕರಣಕ್ಕೆ ಪೂರಕವಾದ ವಸ್ತುಗಳು ಕಂಡುಬಂದಿಲ್ಲ. ನಾವು ಹೋದ ಸಮಯದಲ್ಲಿ ತುಂಬಾ ಸಾರ್ವಜನಿಕರು ಸೇರಿದ್ದರು.

ಸಾರ್ವಜನಿಕರನ್ನು ನಿಯಂತ್ರಿಸಲು ಹೆಚ್ಚಿನ ಪೋಲಿಸ್ ಸಿಬ್ಬಂದಿ ಇದ್ದರು. ಆ ಸಮಯದಲ್ಲಿ ಸ್ಥಳದಲ್ಲಿ ದಾಖಲೆಗಳನ್ನು ತಯಾರಿಸಲು ಸಾಧ್ಯ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

10. ಸ್ಥಳದಲ್ಲಿ ತನಿಖಾಧಿಕಾರಿ ನಕ್ಷೆಯನ್ನು ತಯಾರಿಸಿದ್ದಾರೆ. ಅದಕ್ಕೆ ನನ್ನ ಸಹಿ ಪಡೆದಿಲ್ಲ. ಸಿಟೌಟ್ ನಿಂದ ಗೇಟಿಗೆ ಸುಮಾರು 18 ರಿಂದ 20 ಅಡಿ ದೂರ ಇರಬಹುದು. ಪೋಲಿಸರು ಅದನ್ನು ಅಳತೆ ಮಾಡಿದ್ದಾರೆ. ಮನೆಯ ಒಳಗೆ ತಕ್ಷೀರು ನಡೆದಿದೆ ಎನ್ನಲಾದ ಸ್ಥಳಗಳ ಅಳತೆ ಮಾಡಿಲ್ಲ. ಸ್ಥಳದಲ್ಲಿ ತನಿಖಾಧಿಕಾರಿ ತಕ್ಷೀರು ಸ್ಥಳಗಳ ಬಗ್ಗೆ ಮಾಹಿತಿ ನೀಡಿಲ್ಲ. ಸದ್ರಿ ಮನೆಗೆ ಹಿಂದಿನಿಂದ ಬಾಗಿಲು ಇದ್ದು ಅದು ದಕ್ಷಿಣ ದಿಕ್ಕಿಗೆ ಇದೆ. ತಕ್ಷೀರು ಮನೆಯ ದಕ್ಷಿಣದಲ್ಲಿರುವ ಇನ್ನೊಂದು ಮನೆಗೆ ಮತ್ತು ತಕ್ಷೀರು ಮನೆಯ ನಡುವೆ ಕಂಪೌಂಡ್ ಇದೆ. ದಕ್ಷಿಣದಲ್ಲಿರುವ ಕಾಂಪೌಂಡ್ ಪಕ್ಕ ಸಣ್ಣ ಪುಟ್ಟ ಗಿಡಗಳು ಇವೆ, ಮರಗಳು ಇಲ್ಲ.

11. ಆರೋಪಿ ಬೈಕನ್ನು ಹತ್ತಿದ್ದಾನೆ ಎಂದು ಹೇಳುವ ಸ್ಥಳ ತೃಪ್ತಿ ಲೇ ಔಟ್ ನಿಂದ ಮುಖ್ಯ ರಸ್ತೆಗೆ ಸೇರುವ ಸ್ಥಳ ಆಗಿರುತ್ತದೆ. ಆತ ಬೈಕ್ ಹತ್ತಿದ ಸ್ಥಳ ನೇಜಾರಿನಿಂದ ಸಂತೆಕಟ್ಟೆಗೆ ಹೋಗುವ ರಸ್ತೆಯ ಎಡ ಭಾಗಕ್ಕೆ ಬರುತ್ತದೆ. ನನ್ನ ಸಮಕ್ಷಮ ತನಿಖಾಧಿಕಾರಿ ಸ್ಥಳದಲ್ಲಿದ್ದ ಸಾರ್ವಜನಿಕರನ್ನು ಸಾಕ್ಷಿದಾರರಾಗಿ ಸಹಕರಿಸಿ ಎಂದು ಕೇಳಿಲ್ಲ. ಬೈಕ್ ಹತ್ತಿದ ಸ್ಥಳದಿಂದ ನಂತರ ನಾವು ಆತ ಬೈಕ್ ಇಳಿದ ಸ್ಥಳಕ್ಕೆ ಬಂದೆವು. ಸದ್ರಿ ಸ್ಥಳ ಸಂತೆಕಟ್ಟೆ-ನೇಜಾರು ಜಂಕ್ಷನ್ ಇರುತ್ತದೆ. ಈ ವಿಷಯವನ್ನು ಮಹಜರಿನಲ್ಲಿ ಬರೆದಿದ್ದಾರೆ. ಸದ್ರಿ ಸ್ಥಳ ಜನ ನಿಬಿಡ ಸ್ಥಳ ಮತ್ತು ಅಕ್ಕಪಕ್ಕ ಅಂಗಡಿ ಮುಗ್ಗಟ್ಟುಗಳು ಇವೆ. ಸದ್ರಿ ಸ್ಥಳದಲ್ಲಿ ಸಾರ್ವಜನಿಕರು ಸೇರಿದ್ದರು. ನನ್ನ ಸಮಕ್ಷಮ ತನಿಖಾಧಿಕಾರಿ ಸ್ಥಳದಲ್ಲಿದ್ದ ಸಾರ್ವಜನಿಕರನ್ನು ಸಾಕ್ಷಿದಾರರಾಗಿ ಸಹಕರಿಸಿ ಎಂದು ಕೇಳಿಲ್ಲ.

12. ಭಾವಚಿತ್ರಗಳನ್ನು ಕ್ಯಾಮರಾದಿಂದ ತೆಗೆದಿದ್ದಾರೆ. ಕ್ಯಾಮರಾದ ಹೆಸರು ಗೊತ್ತಿಲ್ಲ. ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ರೀತಿ ಆರೋಪಿ ಯಾವುದೇ ಘಟನಾ ಸ್ಥಳಗಳನ್ನು

ತೋರಿಸುತ್ತೇನೆ ಎಂದು ಹೇಳಿಲ್ಲ ಮತ್ತು ಆತ ನಮ್ಮನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ದಿನಾಂಕ 16.11.2023 ರ ಪೂರ್ವದಲ್ಲಿ ತನಿಖಾಧಿಕಾರಿ ಘಟನಾ ಸ್ಥಳಕ್ಕೆ ಹಲವಾರು ಬಾರಿ ಭೇಟಿ ಕೊಟ್ಟಿರುವ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನಿಪಿ-260 ರಿಂದ 267 ರ ತನಕ ದಾಖಲೆಗಳನ್ನು ಪ್ರಕರಣಕ್ಕಾಗಿ ಸೃಷ್ಟನೆ ಮಾಡಲಾಗಿದೆ ಎಂದರೆ ಸರಿಯಲ್ಲ. ದಾಖಲೆಗಳಿಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸಮಕ್ಷಮದಲ್ಲಿ ಯಾವುದೇ ಘಟನಾ ಸ್ಥಳಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಮಹಜರಿಗೆ ಸಂಬಂಧಪಟ್ಟ ಪೋಟೋಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆ ದಿನ ನಾನು ನೋಡಿದ ಮೊಬೈಲ್ ಸ್ಕ್ರೀನ್ ಸುಸ್ಥಿತಿಯಲ್ಲಿತ್ತು. ಮುದ್ದೆಮಾಲು-34 ರ ಸ್ಕ್ರೀನ್ ಬ್ರೇಕ್ ಆಗಿದೆ ಎಂದರೆ ಸಾಕ್ಷಿ ಈಗ ಹಾಗೆ ಕಾಣುತ್ತದೆ ಎನ್ನುತ್ತಾರೆ. ಮೊಬೈಲನ್ನು ಇದೇ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಮಾಧ್ಯಮದಲ್ಲಿ ನೋಡಿದ ಆಧಾರದ ಮೇಲೆ ಗುರುತಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರಕಾರಿ ನೌಕರನಾಗಿ ರುವುದರಿಂದ ಪೋಲಿಸರು ತಿಳಿಸಿದ ರೀತಿ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ